ಸಾಂಕ್ರಾಮಿಕವಾದುದರಿಂದ ಯಾರನ್ನೂ ಊರು ಬಿಟ್ಟು ಹೊರಗೆ ಹೋಗಲು ಬಿಡುತ್ತಿರಲಿಲ್ಲ. ರೋಗಿಗಳನ್ನು ದೂರದ ಯಾವುದಾದರೂ ಎತ್ತರದ ಸ್ಥಳದಲ್ಲಿರುವ ವಿಶ್ರಾಮಧಾಮದ ಪ್ರಶಾಂತ ಸ್ಥಳಗಳಿಗೆ ಗುಣ ಪಡೆಯಲು ಕಳಿಸುತ್ತಾರಲ್ಲ, ಹಾಗೆ ಹೋಗುವ ಆಸೆ ಪ್ರತಿಯೊಬ್ಬರಿಗೂ ಇತ್ತು. ಆದರೆ ವಿಧಿಯಿಲ್ಲದೆ ಮರಣಶಯ್ಯೆಗೆ ಗುರಿ ಪಡಿಸಿದ ಸ್ಥಿತಿ ನಮ್ಮದಾಗಿತ್ತು. ದಾರಿಯಲ್ಲೆಲ್ಲ ನಾವು ಅವೇ ಅವೇ ಮುಖಗಳನ್ನು ನೋಡಬೇಕಾಗಿ ಬಂದಿತ್ತು. ಹಾಗೂ ಅವರ ಮುಖಗಳ ಮೇಲೆ ನಾವು ಸಾವನ್ನು ಹುಡುಕತೊಡಗಿದ್ದೆವು. ಯಾರ ಸಾವು ಮೊದಲು ಘಟಿಸಬಹುದು ಎಂದು ನಿರೀಕ್ಷೆಯಲ್ಲಿದ್ದೆವು.

ಡಾಕ್ಟರರ ಪ್ರತೀಕ್ಷಾ ಕಕ್ಷದಲ್ಲಿ ಗಿಜಿಗಿಜಿ ಜನರ ನಡುವೆ ಕಾಯುತ್ತಿದ್ದವರಲ್ಲಿ ಒಬ್ಬಾತ ಮುಖಕ್ಕೆ ಮಾಸ್ಕ್ ಹಾಕಿ ಗೋಡೆಗೊರಗಿ ಮೌನವಾಗಿ ನಿಂತಿದ್ದ. ಅವನನ್ನು ನಾನು ಬಹಳ ದಿನಗಳಿಂದ ಅಲ್ಲಿಯೇ ನಿಂತಿರುವುದನ್ನು ನೋಡಿದ್ದೆ. ಯಾರೊಂದಿಗೂ ಅವನು ಮಾತನಾಡುತ್ತಿರಲಿಲ್ಲ. ಅವನಿಗೆ ಹಾಗೆ ಗೋಡೆಗೊರಗಿ ನಿಂತು ಸಾವಿಗಾಗಿ ಕಾಯುತ್ತಿರುವುದು ಸಾಕಾಗಿ ಬೇಸತ್ತವನಂತಿದ್ದ. ಒಂದು ದಿನ ಅವನು ಒಮ್ಮೆಲೇ ತನ್ನ ಮಾಸ್ಕ್ ತೆಗೆದು ಒಗೆದು ದೊಡ್ಡ ಸ್ವರದಲ್ಲಿ, “ನಾನೀಗ ಒಂದು ಕತೆ ಹೇಳುತ್ತೇನೆ. ಎಲ್ಲರೂ ಕೇಳಿರಿ” ಎಂದು ಹೇಳಿ ಎಲ್ಲರ ಗಮನವನ್ನೂ ತನ್ನೆಡೆಗೆ ಸೆಳೆದ. ನಾವೆಲ್ಲ ಮುಖ ತಿರುಗಿಸಿ ಅವನತ್ತ ನೋಡಿದೆವು. “ನಾವೆಲ್ಲ ನಮ್ಮ ನಮ್ಮ ಹೆಂಡಂದಿರನ್ನೂ ಮುಟ್ಟಲಾಗುವುದಿಲ್ಲ.

